# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 221 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2021. |
| ಉತ್ತರಿಸುವವರು | : | ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ | Answer |
|---|---|---|---|
| ಅ) | ಬೀದರ್ ನಗರದ ಗಾಂಧಿಗಂಜ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ಕೈಗಾರಿಕೆಗಳಿಗಾಗಿ ಎಷ್ಟು ನಿವೇಶನ / ಶೆಡ್‌ಗಳಿವೆ; ಇವುಗಳಲ್ಲಿ ಮಂಜೂರಾಗಿರುವುದು ಎಷ್ಟು; ಮತ್ತು ಯಾವ ಸಾಲಿನಲ್ಲಿ ಮಂಜೂರಾಗಿದೆ; (ವಿವರ ಮಾಹಿತಿ ನೀಡುವುದು) | • ಬೀದರ್ ನಗರದ ಗಾಂಧಿಗಂಜನ ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕಾ ವಸಾಹತುವಿನಲ್ಲಿ 34 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ ಮತ್ತು 22 ಕೈಗಾರಿಕಾ ಶೆಡ್‌ಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.<br>• ನಿಗಮದ ಕೈಗಾರಿಕಾ ವಸಾಹತುವಿನಲ್ಲಿರುವ ಎಲ್ಲಾ ನಿವೇಶನ ಮತ್ತು ಶೆಡ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br>• ಹಂಚಿಕೆಯಾದ ನಿವೇಶನ ಮತ್ತು ಶೆಡ್‌ಗಳ ವಿವರಗಳು ಈ ಕೆಳಕಂಡಂತಿರುತ್ತವೆ: | • KSSIDC has developed 34 Industrial plots and constructed 22 Industrial Sheds at Industrial Estate Gandhiganj in Bidar City.<br>• KSSIDC has allotted all the Industrial Plots and sheds in the Industrial Estate<br>• The details of allotment of plots and sheds are as under; |

| ಕ್ರ ಸ | ಹಂಚಿಕೆಯಾದ ವರ್ಷ | ಹಂಚಿಕೆಯಾದ ನಿವೇಶನಗಳು | ಹಂಚಿಕೆಯಾದ ಮಳಿಗೆಗಳು | ಒಟ್ಟು |
|---|---|---|---|---|
| 1 | 1970–71 | 04 | — | 04 |
| 2 | 1971–72 | 02 | — | 02 |
| 3 | 1975–76 | 02 | — | 02 |
| 4 | 1976–77 | 01 | — | 01 |
| 5 | 1978–99 | 03 | 01 | 04 |
| 6 | 1979–80 | 01 | 02 | 03 |
| 7 | 1980–81 | 02 | 02 | 04 |
| 8 | 1981–82 | 01 | 01 | 02 |
| 9 | 1982–83 | 01 | 02 | 03 |
| 10 | 1984–85 | 02 | 02 | 04 |
| 11 | 1985–86 | 03 | 01 | 04 |
| 12 | 1986–87 | 03 | 01 | 04 |
| 13 | 1987–88 | 01 | — | 01 |
| 14 | 1988–89 | 02 | 04 | 06 |
| 15 | 1990–91 | 03 | 01 | 04 |
| 16 | 1992–93 | 02 | 01 | 04 |
| 17 | 1995–96 | — | 01 | 01 |
| 18 | 1999–2000 | 01 | 03 | 04 |
| | ಒಟ್ಟು | 34 | 22 | 56 |

| Sl. No. | Allotted year | Plots Allotted | Sheds Allotted | Total |
|---|---|---|---|---|
| 1 | 1970-71 | 04 | -- | 04 |
| 2 | 1971-72 | 02 | -- | 02 |
| 3 | 1975-76 | 02 | -- | 02 |
| 4 | 1976-77 | 01 | -- | 01 |
| 5 | 1978-99 | 03 | 01 | 04 |
| 6 | 1979-80 | 01 | 02 | 03 |
| 7 | 1980-81 | 02 | 02 | 04 |
| 8 | 1981-82 | 01 | 01 | 02 |
| 9 | 1982-83 | 01 | 02 | 03 |
| 10 | 1984-85 | 02 | 02 | 04 |
| 11 | 1985-86 | 03 | 01 | 04 |
| 12 | 1986-87 | 03 | 01 | 04 |
| 13 | 1987-88 | 01 | -- | 01 |
| 14 | 1988-89 | 02 | 04 | 06 |
| 15 | 1990-91 | 03 | 01 | 04 |
| 16 | 1992-93 | 02 | 01 | 04 |
| 17 | 1995-96 | -- | 01 | 01 |
| 18 | 1999-2000 | 01 | 03 | 04 |
| | Total | 34 | 22 | 56 |

| ಕ್ರ ಸಂ. | ಪ್ರಶ್ನೆ | ಉತ್ತರ | Answer |
|---|---|---|---|
| ಆ) | ಈ ಕೈಗಾರಿಕೆ ವಸಾಹತು ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಡಲಾದ ನಿವೇಶನ / | ಕೆ.ಎಸ್.ಎಸ್.ಐ.ಡಿ.ಸಿ. ನಿಗಮವು 2004ರಲ್ಲಿ ಹಂಚಿಕೆ ನಿಯಮಗಳನ್ನು ಅಳವಡಿಸಿಕೊಂಡು 2005 ರಿಂದ ಜಾರಿಗೊಳಿಸಿರುತ್ತದೆ. ಈ ಹಂಚಿಕೆ ನಿಯಮಗಳು ಜಾರಿಯಾದ ನಂತರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ | The KSSIDC has framed allotment Rules in 2004 and implemented from 2005. Accordingly, the reservation for allotment of Industrial plots/sheds to Scheduled Caste/Scheduled Tribes and other |

| | | | |
|---|---|---|---|
| | ಶೆಡ್‌ಗಳೆಷ್ಟು; ಯಾರ್‍ಯಾರಿಗೆ ಮಂಜೂರು ನೀಡಲಾಗಿದೆ; (ವಿಳಾಸದೊಂದಿಗೆ ವಿವರವಾದ ಮಾಹಿತಿ ನೀಡುವುದು) | ಪ್ರವರ್ಗದವರಿಗೆ ಹಂಚಿಕೆ ಮಾಡಲು, ನಿಗಮದಿಂದ ಅಭಿವೃದ್ಧಿಪಡಿಸಿರುವ ಕೈಗಾರಿಕಾ ನಿವೇಶನ ಮತ್ತು ಮಳಿಗೆಗಳನ್ನು ಮೀಸಲಿರಿಸಲು ಕ್ರಮ ಕೈಗೊಂಡಿರುತ್ತದೆ.<br><br>ಪ್ರಸ್ತಾಪಿತ ಗಾಂಧಿಗಂಜ ಕೈಗಾರಿಕಾ ವಸಾಹತುವನ್ನು ನಿಗಮದಿಂದ ಹಂಚಿಕೆ ನಿಯಮಗಳು ಜಾರಿಯಾಗುವ ಮೊದಲೇ ಅಂದರೆ 1969ನೇ ಸಾಲಿನಲ್ಲಿ ಭೂಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಿ ಕೈಗಾರಿಕಾ ನಿವೇಶನ/ಮಳಿಗೆಗಳನ್ನು 1971 ರಿಂದ 2000 ಅವಧಿಯಲ್ಲಿ ಹಂಚಿಕೆ ಮಾಡಲಾಗಿರುತ್ತದೆ.<br><br>ಆದಾಗ್ಯೂ 1984ರಲ್ಲಿ ಖಾಲಿ ಇರುವ ನಿವೇಶನಕ್ಕೆ ಪರಿಶಿಷ್ಟ ಜಾತಿಯ ಒಬ್ಬ ಅರ್ಜಿದಾರರಿಂದ ಸ್ವೀಕೃತವಾದ ಅರ್ಜಿಯನ್ನು ಪರಿಗಣಿಸಿ, ವಿಶೇಷ ನಿವೇಶನ ಸಂಖ್ಯೆ 01 ಅನ್ನು ಶ್ರೀ ಅಪ್ಪಣ್ಣ, ತಂದೆ ಭೀಮಣ್ಣ, ಮೆ: ಭಾರತ್ ಫುಟ್‌ವಿಯರ್, ಗಾಂಧಿಗಂಜ್, ಬೀದರ್ ಇವರಿಗೆ ಗಾಂಧಿಗಂಜ ಕೈಗಾರಿಕಾ ವಸಾಹತುವಿನಲ್ಲಿ ಹಂಚಿಕೆ ಮಾಡಲಾಗಿರುತ್ತದೆ. | categories have been reserved after framing allotment rules.<br><br>The said Gandhiganj Industrial Estate was developed in the year 1969 and allotment of industrial plots/sheds were done during 1971 to 2000, the period which is much before framing of the Allotment Rules.<br><br>However, one Scheduled Caste entrepreneur, Sri. Appanna S/o Bhimanna, M/s. Bharath Foorwear Gandhiganj, Bidar, who had applied for vacant plot in 1984 was allotted Spl Plot no. 1 at Gandhiganj Industrial Estate. |
| ಇ) | 2021-22ನೇ ಸಾಲಿನಲ್ಲಿ ಇಲಾಖೆಯಲ್ಲಿರುವ ಒಟ್ಟು ಯೋಜನೆಗಳಾವುವು ಹಾಗೂ ಅವು ಯಾವ ಹಂತದಲ್ಲಿವೆ? (ಅದರ ಸಂಪೂರ್ಣವಾದ ಮಾಹಿತಿ ನೀಡುವುದು) | 2021-22ನೇ ಸಾಲಿನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿರುವ ಯೋಜನೆಗಳ ವಿವರಗಳು ಮತ್ತು ಅವುಗಳ ಹಂತದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. | The details of schemes being implemented during 2021-22 and their status is given in the **Annexure-1** |

ಸಿಐ 205 ಸಿಎಸ್‌ಸಿ 2021

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ-1

ಶ್ರೀ. ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 221ಕ್ಕೆ ಉತ್ತರ

| # | ಯೋಜನೆಯ ಹೆಸರು | ಗುರಿ | | ಸಾಧನೆ | |
|---|---|---|---|---|---|
| | | ಭೌತಿಕ | ಆರ್ಥಿಕ ರೂ.ಕೋಟಿಗಳಲ್ಲಿ | ಭೌತಿಕ | ಆರ್ಥಿಕ ರೂ.ಕೋಟಿಗಳಲ್ಲಿ |
| 1 | ಗುಂಪು ಅಭಿವೃದ್ಧಿ ಯೋಜನೆ | | 1.00 | | 0.50 |
| 2 | ತರಬೇತಿ, ವಿಚಾರಸಂಕಿರಣ, ಆಡಳಿತಾತ್ಮಕ ವೆಚ್ಚ | | 4.00 | | 3.83 |
| 3 | ಪ್ರೋತ್ಸಾಹ ಮತ್ತು ರಿಯಾಯಿತಿಗಳು | | 292.25 | | 0.00 |
| 4 | ವಿಶೇಷ ಘಟಕ ಯೋಜನೆ-60:40 ಯೋಜನೆ | 120 | 6.50 | 137 | 4.46 |
| 5 | ವಿಶೇಷ ಘಟಕ ಯೋಜನೆ-ಸಾಲಸಂಸ್ಕರಣಾ ಶುಲ್ಕ ಮರುಪಾವತಿ | 23 | 0.46 | 6 | 0.20 |
| 6 | ವಿಶೇಷ ಘಟಕ ಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ ಸಾಲ | 180 | 18.40 | 16 | 2.83 |
| | ವಿಶೇಷ ಘಟಕ ಯೋಜನೆ-ಕೌಶಲ್ಯಾಭಿವೃದ್ಧಿ, ಅಧ್ಯಯನ ಪ್ರವಾಸ | | 0.19 | 0 | 0 |
| 7 | ವಿಶೇಷ ಘಟಕ ಯೋಜನೆ-ನಿವೇಶನ ಸಹಾಯಧನ | 126 | 70.00 | | 35.00 |
| 8 | ಗಿರಿಜನ ಉಪ ಯೋಜನೆ-60:40 ಯೋಜನೆ | 60 | 3.00 | 37 | 1.30 |
| 9 | ಗಿರಿಜನ ಉಪ ಯೋಜನೆ-ಸಾಲಸಂಸ್ಕರಣಾ ಶುಲ್ಕ ಮರುಪಾವತಿ | 6 | 0.13 | 0 | 0 |
| 10 | ಗಿರಿಜನ ಉಪ ಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ ಸಾಲ | 31 | 2.05 | 2 | 0.27 |
| | ಗಿರಿಜನ ಉಪ ಯೋಜನೆ-ಕೌಶಲ್ಯಾಭಿವೃದ್ಧಿ, ಅಧ್ಯಯನ ಪ್ರವಾಸ | | 0.09 | 0 | 0 |
| 11 | ಗಿರಿಜನ ಉಪ ಯೋಜನೆ-ನಿವೇಶನ ಸಹಾಯಧನ | 50 | 30.00 | | 15.00 |
| 12 | ಖಾದಿ ಮತ್ತು ಗ್ರಾಮೋದ್ಯೋಗ ಪ್ರೋತ್ಸಾಹ ಮಜೂರಿ ಮತ್ತು ಮಾರುಕಟ್ಟೆ ಅಭಿವೃದ್ಧಿ ಸಹಾಯಧನ | | 30.00 | | 7.50 |
| 13 | ಕಲ್ಪವೃಕ್ಷ ಕಾಯಕ ನೀತಿ | | 10.00 | | 5.00 |
| 14 | ಕರಕುಶಲಕಲೆಗೆ ಬೆಂಬಲ | | 1.50 | | 0.75 |
| 15 | ವಸತಿ ಗೃಹಗಳು | | 4.00 | | 0.00 |
| | **ಒಟ್ಟು** | | **473.57** | | **76.64** |

**2021-22ನೇ ಸಾಲಿನ ಆಯವ್ಯಯ ಭಾಷಣದ ಹೊಸ ಯೋಜನೆಗಳು.**

| ಕ್ರಂ.ಸ. | ಆಯವ್ಯಯ ಭಾಷಣದಲ್ಲಿನ ಕಂಡಿಕೆ ಸಂಖ್ಯೆ & ವಿವರಗಳು<br>**Para No. of Budget Speech & Details** | ತೆಗೆದುಕೊಂಡಿರುವ ಕ್ರಮ<br>**Action taken.** |
|---|---|---|
| 1. | **213**<br>"ಬೆಂಗಳೂರು-ಮುಂಬೈ ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಎರಡು ಕಡೆಗಳಲ್ಲಿ ತಲಾ ಕನಿಷ್ಠ 500 ಎಕರೆ ಜಾಗದಲ್ಲಿ ಮುಖ್ಯಮಂತ್ರಿಗಳ ಮೆಗಾ ಸಂಯೋಜಿತ ಕೈಗಾರಿಕಾ ಟೌನ್ ಶಿಪ್ ಗಳನ್ನು ಸ್ಥಾಪಿಸಲಾಗುವುದು. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ | ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯ ಸಹಮತಿ ಪಡೆದು ಆದೇಶ ಸಂಖ್ಯೆ: ಸಿಐ 59 ಸಿಎಸ್ ಸಿ 2021, ದಿ: 12.10.2021ರನ್ವಯ 2021-22ರ ಆಯವ್ಯಯ ಭಾಷಣದ ಕಂಡಿಕೆ 213ರಲ್ಲಿ ಘೋಷಿಸಿರುವಂತೆ, ಬೆಂಗಳೂರು-ಮುಂಬೈ ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಎರಡು ಕಡೆಗಳಲ್ಲಿ ತಲಾ ಕನಿಷ್ಠ 500 ಎಕರೆ ಜಾಗದಲ್ಲಿ ಮುಖ್ಯಮಂತ್ರಿಗಳ ಮೆಗಾ ಸಂಯೋಜಿತ ಕೈಗಾರಿಕಾ ಟೌನ್ ಶಿಪ್ ಗಳನ್ನು ಸ್ಥಾಪಿಸುವ |

| | | |
|---|---|---|
| | ನಿಗಮಗಳ ವತಿಯಿಂದ ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣವಾಗಲಿರುವ ಈ ಟೌನ್ ಶಿಪ್ ಗಳಿಂದ ಮುಂದಿನ ಮೂರು ವರ್ಷಗಳಲ್ಲಿ ಅಂದಾಜು 10 ಸಾವಿರ ಕೋಟಿ ರೂ.ಗಳ ಖಾಸಗಿ ಬಂಡವಾಳ ಆಕರ್ಷಿಸುವ ಮೂಲಕ ಐದು ಲಕ್ಷ ಉದ್ಯೋಗಾವಕಾಶ ಸೃಷ್ಟಿಸುವ ನಿರೀಕ್ಷೆ ಇದೆ". | ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಕುರಿತು ಸರಳ ಯೋಜನಾ ವರದಿ ಸಿದ್ಧಪಡಿಸಲು ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಲಾಗಿದೆ. |
| 2. | **214**<br>"ರಾಜ್ಯದಲ್ಲಿ ಉತ್ಪಾದನಾ ವಲಯವನ್ನು ಆಕರ್ಷಿಸುವ ಉದ್ದೇಶದಿಂದ ಪೀಣ್ಯದಲ್ಲಿ ಕೈಗಾರಿಕಾ ಟೌನ್ ಶಿಪ್ ಅನ್ನು ಸ್ಥಾಪಿಸಲಾಗುವುದು. ಇಲ್ಲಿ ಅಗತ್ಯ ಮೂಲಭೂತ ಸೌಲಭ್ಯವನ್ನು ರೂ 100.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು". | ದಿನಾಂಕ: 14.09.2021ರಂದು ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಿದೆ ಹೊಸ ಯೋಜನೆಗೆ ತಾತ್ವಿಕ ಅನುಮೋದನೆ ಕೋರಲಾಗಿದೆ. ಆರ್ಥಿಕ ಇಲಾಖೆಯಿಂದ ಅನುಮೋದನೆ ಬಾಕಿ ಇರುತ್ತದೆ ಹಾಗೂ – CI 68 CSC 2021 (P1) ದಿನಾಂಕ: 14.09.2021ರಂದು ಯೋಜನಾ ಇಲಾಖೆಗೆ ಕಡತ ಸಲ್ಲಿಸಲಾಗಿತ್ತು. ಹೊಸ ಯೋಜನೆಗೆ ತಾತ್ವಿಕ ಅನುಮೋದನೆಯನ್ನು ದಿ: 04.10.2021 ರಂದು ನೀಡಿದೆ. ಮುಂದುವರೆದು, ಪೀಣ್ಯ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವನ್ನು – Peenya Industrial Township Authority ಸ್ಥಾಪಿಸುವ ಕುರಿತು ದಿನಾಂಕ: 04.09.2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರದೇಶದ ಆದಾಯ ಸಂಪನ್ಮೂಲಗಳ ವಿವರ, ನಿರ್ವಹಣೆ ಮಾಡಬೇಕಾದ ಆಸ್ತಿ ಮತ್ತು ಸೇವೆಗಳು, ಇದಕ್ಕೆ ತಗಲುವ ಮಾನವ ಸಂಪನ್ಮೂಲ ಮತ್ತು ಆರ್ಥಿಕ ವೆಚ್ಚ ಮತ್ತು ಉದ್ದೇಶಿತ ಟೌನ್ ಶಿಪ್ ಪ್ರಾಧಿಕಾರದ ಸುಸ್ಥಿರತೆ, Methodology and Road Map, ಕಾರ್ಯವಿಧಾನ ಇತ್ಯಾದಿ ಕುರಿತಂತೆ ಸಮಗ್ರ ವರದಿಯೊಂದನ್ನು ನೀಡುವ ಸಲುವಾಗಿ ಅಧಿಕಾರಿಗಳ ಸಮಿತಿ ರಚನೆ ಮಾಡಿ ಸದರಿ ಸಮಿತಿಯು ಒಂದು ತಿಂಗಳ ಒಳಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದು ಎಂದು ನಿರ್ಧರಿಸಲಾಗಿರುತ್ತದೆ. ಅದರಂತೆ, ಅಧಿಕಾರಿಗಳ ಸಮಿತಿ ರಚಿಸಿ ಅಧಿಸೂಚನೆಯನ್ನು ದಿ: 20.9.2021ರಂದು ಹೊರಡಿಸಲಾಗಿದೆ. |